# ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 4 ಇಆಇ 2008 (ಪಿ1)

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 15ನೇ ಜುಲೈ 2009

## ಸುತ್ತೋಲೆ

ವಿಷಯ: ಕರ್ನಾಟಕ ಸರ್ಕಾರ ಸಚಿವಾಲಯಕ್ಕೆ ಸೇರಿದ ಸರ್ಕಾರಿ ನೌಕರರಿಗೆ **ಬೆರಳಚ್ಚು ಆಧಾರಿತ ಬಯೋ-ಮೆಟ್ರಿಕ್ ರೀಡರ್‌ನ ಮೂಲಕ ಹಾಜರಾತಿ ನಿರ್ವಹಣಾ ವ್ಯವಸ್ಥೆಯ** ಬಗ್ಗೆ.

ಉಲ್ಲೇಖ:1. ದಿನಾಂಕ:01-09-2008ರ ಸರ್ಕಾರಿ ಪತ್ರ ಸಂಖ್ಯೆ:ಸಿಆಸುಇ 04 ಇಆಇ 2008 (ಪಿ1).
2. ದಿನಾಂಕ: 30-12-2003ರ ಸರ್ಕಾರಿ ಪತ್ರ ಸಂಖ್ಯೆ:ಸಿಆಸುಇ 92 ಇಆಸು 2003.

1. ಕರ್ನಾಟಕ ಸರ್ಕಾರ ಸಚಿವಾಲಯಕ್ಕೆ ಸೇರಿದ ಸರ್ಕಾರಿ ನೌಕರರಿಗೆ ಸಂಬಂಧಿಸಿದಂತೆ ಬೆರಳಚ್ಚು ಆಧಾರಿತ ಬಯೋಮೆಟ್ರಿಕ್ ಪದ್ಧತಿಯನ್ನು ದಿನಾಂಕ: 1-8-2009 ರಿಂದ ಜಾರಿಗೆ ತರಲು ತೀರ್ಮಾನಿಸಲಾಗಿದ್ದು, ಇದರಂತೆ ಬಹುತೇಕ 90% ಭಾಗದಷ್ಟು ಅಧಿಕಾರಿ/ನೌಕರರ ಬೆರಳಚ್ಚು ನೋಂದಣಿ ಮಾಡಲಾಗಿರುತ್ತದೆ. ಬಿಟ್ಟುಹೋಗಿರುವ/ಇದುವರೆಗೂ ನೋಂದಣಿ ಮಾಡದಿರುವ ಅಧಿಕಾರಿ/ನೌಕರರ ಬೆರಳಚ್ಚು ನೋಂದಣಿಯನ್ನು ಇ-ಆಡಳಿತ ಇಲಾಖೆಯಲ್ಲಿ ಮಾಡಲಾಗುವುದು.

2. ಆದ ಕಾರಣ ಬೆರಳಚ್ಚು ಆಧಾರಿತ ಬಯೋ-ಮೆಟ್ರಿಕ್ ರೀಡರ್‌ನಲ್ಲಿ ಇದುವರೆಗೂ ನೋಂದಣಿ ಮಾಡಿಸದಿರುವ ಕರ್ನಾಟಕ ಸಚಿವಾಲಯಕ್ಕೆ ಸೇರಿದ ಅಧಿಕಾರಿ/ನೌಕರರು ಇ-ಆಡಳಿತ ಇಲಾಖೆಯ ಎಎಮ್‌ಎಸ್ ಶಾಖೆಗೆ ಬಂದು ದಿ: 31-7-2009ರೊಳಗೆ ಬೆರಳಚ್ಚು ನೋಂದಣಿ ಮಾಡಿಕೊಳ್ಳಲು ಈ ಮೂಲಕ ಸೂಚಿಸಲಾಗಿದೆ. ಈ ವಿಷಯವನ್ನು ಕರ್ನಾಟಕ ಸರ್ಕಾರ ಸಚಿವಾಲದ ಆಯಾಯಾ ಇಲಾಖೆಯಲ್ಲಿನ ಎಲ್ಲಾ ಸರ್ಕಾರಿ ನೌಕರರಿಗೆ ತಿಳಿಯಪಡಿಸಬೇಕೆಂದು ಹಾಜರಾತಿ ಉಸ್ತುವಾರಿ ಅಧಿಕಾರಿಗಳಿಗೆ ಈ ಮೂಲಕ ಸೂಚಿಸಲಾಗಿದೆ.

**3. ದಿ: 1-8-2009ರಿಂದ ಜಾರಿಗೆ ಬರುವಂತೆ ಸ್ಮಾರ್ಟ್ ಕಾರ್ಡ್ ಆಧಾರಿತ ಹಾಜರಾತಿ ನಿರ್ವಹಣಾ ವ್ಯವಸ್ಥೆಯನ್ನು ರದ್ದುಪಡಿಸಿ, ಕೇವಲ ಬೆರಳಚ್ಚು ಆಧಾರಿತ ಬಯೋ-ಮೆಟ್ರಿಕ್ ರೀಡರ್ ಮೂಲಕ ಮಾತ್ರ ಹಾಜರಾತಿ ನಿರ್ವಹಣಾ ವ್ಯವಸ್ಥೆಯನ್ನು ಮುಂದುವರೆಸಲಾಗುವುದು.**

4. ಉಲ್ಲೇಖಿತ (2)ರ ಆದೇಶದಲ್ಲಿರುವ ಸೂಚನೆಗಳು ಹಾಗೂ ನಿಯಮಗಳು ಬೆರಳಚ್ಚು ದಾಖಲಿಸುವ ವ್ಯವಸ್ಥೆಯಲ್ಲಿಯೂ ಯಾವ ಬದಲಾವಣೆಯೂ ಇಲ್ಲದಂತೆ ಮುಂದುವರೆಯುತ್ತದೆ.

15/07/09

(ಎಂ.ಎನ್. ವಿದ್ಯಾಶಂಕರ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಸಿಆಸುಇ. (ಇ-ಆಡಳಿತ)

ಇವರಿಗೆ,

1. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು
2. ಕರ್ನಾಟಕ ಸರ್ಕಾರ ಸಚಿವಾಲಯದ ಇಲಾಖೆಗಳ ಎಲ್ಲಾ ಹಾಜರಾತಿ ಉಸ್ತುವಾರಿ ಅಧಿಕಾರಿಗಳು
3. ಸರ್ಕಾರದ ಕಾರ್ಯದರ್ಶಿಗಳು, ಕರ್ನಾಟಕ ವಿಧಾನಸಭೆ/ವಿಧಾನ ಪರಿಷತ್ ಸಚಿವಾಲಯ
4. ಬಹುಮಹಡಿ ಕಟ್ಟಡದಲ್ಲಿರುವ ಎಲ್ಲಾ ಇಲಾಖಾ ಮುಖ್ಯಸ್ಥರುಗಳು